VIJAYAKUMAR KANNUR
Digitally signed by VIJAYAKUMAR KANNUR
Date: 2025.07.16 10:46:14 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 15.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ 1, 11 ಮತ್ತು 12 ಪರ ಶ್ರೀJBN ವಕೀಲರಿಂದ :</u>**

ನಾನು ಶಾಲೆ ಕಲಿತಿರುವುದಿಲ್ಲ. ನಾನು ಮನೆಯ ಕೆಲಸ ಬಿಟ್ಟು ಬೇರೆ ಕೆಲಸ ಮಾಡುವುದಿಲ್ಲ. ಈ ದಾವೆ ಯಾವ ಪರಿಹಾರ ಕೋರಿ ದಾಖಲು ಮಾಡಿರುವರು ಎಂದು ನನಗೆ ಮಾಹಿತಿ ಇರುವುದು. ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ನಾವು ಜಮೀನಿಗೆ ಹೋದಾಗ ಪ್ರತಿವಾದಿಯರು ಹೊಡೆಯುವುದು ಬಡಿಯುವುದು ಮಾಡಿರುವುದರಿಂದ ಈ ದಾವೆ ದಾಖಲು ಮಾಡಿರುವೆವು. ಕಳೆದ 5 ವರ್ಷಗಳ ಹಿಂದೆ ಈ ಘಟನೆ ನಡೆದಿರುವುದು. ಇದಕ್ಕೆ ಸಂಬಂದಪಟ್ಟಂತೆ ಯಾವುದೇ ದೂರು ದಾಖಲು ಮಾಡಿರುವುದಿಲ್ಲ.

2. ಈ ದಾವೆಯನ್ನು ಒಟ್ಟು 35 ಎಕರೆಗೆ ಸಂಬಂದಪಟ್ಟಂತೆ ದಾಖಲು ಮಾಡಿರುವೆನು, ಆದರೆ ದಾವಾ ಸರ್ವೆ ನಂಬರಗಳು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ವಜ್ರಬಂಡಿ ಗ್ರಾಮದಲ್ಲಿ ಇರುವವು. ಈ ಗ್ರಾಮವನ್ನು ಹೊರತು ಪಡಿಸಿ ಬೇರೆ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿ . ದಾವಾ ಜಮೀನುಗಳಲ್ಲಿ ಯಾವುದೇ ಕಾಲಕ್ಕೂ ಬೆಳೆ ಬೆಳೆದಿರುವುದಿಲ್ಲ ಮತ್ತು ನಾವು ಕಬ್ಜೆ ವಹಿವಾಟು ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವಾ ಜಮೀನಿನಲ್ಲಿ ಪ್ರತಿವಾದಿ 1, 8, 11 ಮತ್ತು 12 ರವರು ಹಾಗೂ ಮೃತ ಪಾಂಡಪ್ಪ ಇವರು ಕಬ್ಜೆಯನ್ನು ಹೊಂದಿ ಸಾಗುವಳಿ ಮಾಡುತ್ತಿರುವರು ಎಂದರೆ ಸರಿ .

3. ನನ್ನ ತಂದೆ ದಿಃ 03.05.1995 ರಲ್ಲಿ ಮೃತ ಪಟ್ಟಿರುವರು ಎಂದರೆ ಸರಿ . ನನ್ನ ತಾಯಿ ಪ್ರತಿವಾದಿ 1 ರವರು ಎಂದರೆ ಸರಿ . ನನ್ನ ತಂದೆಗೆ 5 ಜನ ಗಂಡು ಮಕ್ಕಳು, ನಾನು ಒಬ್ಬಳೇ ಹೆಣ್ಣು ಮಗಳು ಎಂದರೆ ಸರಿ . ಈ 5 ಜನ ಗಂಡು ಮಕ್ಕಳಲ್ಲಿ ಪಾಂಡಪ್ಪ ಈಗ ಮೃತ

ಪಟ್ಟಿರುವನು ಎಂದರೆ ಸರಿ . ಪ್ರತಿವಾದಿ 3 ರಿಂದ 7 ರವರು ಇತನ ವಾರಸುದಾರರು ಎಂದರೆ ಸರಿ . ನನ್ನ ವಿವಾಹ 1974-75 ನೇ ಸಾಲಿನಲ್ಲಿ ನಂದಿಹಾಲ ಗ್ರಾಮದ ಯಮನಪ್ಪ ಸಾಗನೂರ ಇತನ ಜೊತೆ ಮಾಡಿಕೊಟ್ಟಿರುವರು ಎಂದರೆ ಸರಿ . ನನ್ನ ವಿವಾಹದ ಖರ್ಚು ವೆಚ್ಚಗಳನ್ನು ನನ್ನ ತಂದೆಯೇ ಮಾಡಿರುವರು ಎಂದರೆ ಸರಿ. ಈ ವಿವಾಹನದ ಸಮಯದಲ್ಲಿ ನನಗೆ ಸಾಕಷ್ಟು ಬೆಳ್ಳಿ, ಬಂಗಾರ ನೀಡಿ ಮಾಡಿಕೊಟ್ಟಿರುವರು ಎಂದರೆ ಸರಿಯಲ್ಲ. ನಾನು ವಿವಾಹವಾದಾಗಿನಿಂದ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ , ಆದರೆ ನನ್ನನ್ನು ಪ್ರತಿವಾದಿಯರು ವಜ್ರಮಟ್ಟಿ ಗ್ರಾಮಕ್ಕೆ ಕರೆದುಕೊಂಡು ಬಂದಿದ್ದು , ನಾನು ಈಗ ಇದೇ ಗ್ರಾಮದಲ್ಲಿ ವಾಸಿಸುತ್ತಿರುವೆನು.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.16 10:46:21 +0530